ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 23–9–2017

# ಪತ್ರಿಕಾ ಆಮಂತ್ರಣ

1. **ನವ ಕರ್ನಾಟಕ 2025 ಉದ್ಘಾಟನಾ ಸಮಾರಂಭ:**

**ಉದ್ಘಾಟನೆ:**

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ..

ದಿನಾಂಕ: 25–09–2017, ಸೋಮವಾರ, ಸಮಯ: ಸಂಜೆ 6.30 ಗಂಟೆಗೆ.

ಸ್ಥಳ: ಗ್ರ್ಯಾಂಡ್ ಬಾಲ್ ರೂಂ. ಹೋಟೆಲ್ ಜೆ.ಡಬ್ಲ್ಯೂ ಮ್ಯಾರಿಯಟ್, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

**ಸಂಖ್ಯೆ:117/237**

## ಸೆಪ್ಟೆಂಬರ್ 23 ರಿಂದ 28 ರವರೆಗೆ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 23 ( ಕರ್ನಾಟಕ ವಾರ್ತೆ) :

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ 6 ದಿನಗಳ 90ನೇ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಸೆಪ್ಟೆಂಬರ್ 23 ರಿಂದ 28 ರವರೆಗೆ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಆಯೋಜಿಸಲು ಉದ್ದೇಶಿಸಿದೆ.

ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ.

ರಫ್ತು ಕುರಿತ ಕೆಲವು ಅಂಶಗಳನ್ನು ಚರ್ಚಿಸುವ ಮೂಲಕ ವ್ಯಾಪಾರಕ್ಕೆ ಅನುಕೂಲವಾಗಲಿದ್ದು, ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳು/ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿ.ಟಿ.ಪಿ.ಸಿ. ಕಚೇರಿಯಲ್ಲಿ ನೊಂದಣಿಯನ್ನು ಮಾಡಿಸಬಹುದಾಗಿದೆ.

ತರಬೇತಿಯು ವಿ.ಟಿ.ಪಿ.ಸಿ. ಟ್ರೈನಿಂಗ್ ಹಾಲ್, ಬಿ.ಎಂ.ಟಿ.ಸಿ. ಕಟ್ಟಡ, 'ಎ" ಬ್ಲಾಕ್, 3ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027 ದಲ್ಲಿ ನಡೆಯಲಿದೆ.

ಹೆಚ್ಚಿನ ವಿವರಕ್ಕಾಗಿ ಶ್ರೀ ಸಿ.ಎಸ್. ಭಾಸ್ಕರ್, ವಿ.ಟಿ.ಪಿ.ಸಿ. (ಮೊ. 9880958218) ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್

**ಸಂಖ್ಯೆ:118/238**

## C.N.R. RAO RECEIVES MAJOR INTERNATIONAL HONOR FOR MATERIALS RESEARCH

Bangalore, September 23, (Karnataka Information)

**Prof. C.N.R. Rao is the recipient of the highly prestigious Von Hippel Award for materials research. This international award is the highest honor in materials research "recognizing those qualities most prized by materials scientists and engineers- brilliance and originality of intellect, combined with vision that transcends the boundaries of conventional scientific disciplines."**

**The citation reads "For his immense interdisciplinary contributions to the development of novel functional materials, including nanomaterials, graphene, superconductivity, 2D materials and colossal magneto resistance".**

**The award will be presented in Boston on November 29, 2017 during the MRS meeting. The award includes a cash prize, trophy and a diploma. Prof. Rao is the first Asian to receive the award.**

**ಸಂಖ್ಯೆ:119/239**

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಸೆಪ್ಟೆಂಬರ್ 23 ( ಕರ್ನಾಟಕ ವಾರ್ತೆ) :**

**ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.** ದಿನಾಂಕ: 24-09-2017ರ **ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.**

1) **ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ **ಶೀರ್ಷಿಕೆಯಡಿ** ಶ್ರೀಮತಿ ಅರುಣಕುಮಾರಿ ಮತ್ತು ತಂಡ, ಚಿಕ್ಕಬಳ್ಳಾಪುರ ರವರಿಂದ ಸುಗಮ ಸಂಗೀತ **ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) **ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" ಎಂಬ **ಶೀರ್ಷಿಕೆಯಡಿ** ಶ್ರೀ ಬಸವರಾಜಸಿದ್ದಪ್ಪ ಮಾದರ ಮತ್ತು ತಂಡ, ಕೊಪ್ಪಳ ರವರಿಂದ ತತ್ವ ಪದ **ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

3) **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ** ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

4) **ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ** ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ **ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.**

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- **ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ** ಯೂನಿವರ್ಸ್ ಆರ್ಟ್ ಫೌಂಡೇಶನ್, **ಬೆಂಗಳೂರು ಸಂಸ್ಥೆಯ ಸಹಯೋಗದೊಂದಿಗೆ** ಕು. ಪದ್ಮಾ ವಿಜಯ್ ರವರಿಂದ ಭರತ ನಾಟ್ಯ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

- **ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ** ಶ್ರೀವಾಣಿ ವಿದ್ಯಾ ಕೇಂದ್ರ, ರಾಜಾಜಿನಗರ , ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕತಿಕ ಕಾರ್ಯಕ್ರಮವನ್ನು **ಏರ್ಪಡಿಸಲಾಗಿದೆ.**

# ¨ÉÃPÀj GvÁàzÀ£É GzÀåªÀÄ²Ã®vÉ vÀgÀ¨ÉÃw

**ಸಂಖ್ಯೆ:120/240**

**ಬೆಂಗಳೂರು, ಸೆಪ್ಟೆಂಬರ್ 23 ( ಕರ್ನಾಟಕ ವಾರ್ತೆ) :**

ಕೇಂದ್ರ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಸಂಸ್ಥೆಯ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ವಿವಿದೋದ್ದೇಶ ತರಬೇತಿ ಕೇಂದ್ರ ಒಂದು ವಾರ ಅವಧಿಯ ಬೇಕರಿ ಉತ್ಪಾದನೆ ಉದ್ಯಮಶೀಲತೆ ತರಬೇತಿಯನ್ನು ನಾಲ್ಕು ತಂಡಗಳನ್ನು ಹಮ್ಮಿಕೊಂಡಿದೆ.

ಮೊದಲ ತಂಡಕ್ಕೆ ತರಬೇತಿ ಅಕ್ಟೋಬರ್ 9, ಎರಡನೇ ತಂಡಕ್ಕೆ ಅಕ್ಟೋಬರ್ 23, ಮೂರನೇ ತಂಡಕ್ಕೆ ಅಕ್ಟೋಬರ್ 30 ಹಾಗೂ ನಾಲ್ಕನೇ ತಂಡಕ್ಕೆ ನವೆಂಬರ್ 6 ರಂದು ತರಬೇತಿ ಆರಂಭವಾಗಲಿದೆ.

ಈ ತರಬೇತಿಯು ಡಾಲರ್ ಅಕಾಡಮಿ ಫಾರ್ ಸ್ಕಿಲ್ ಮತ್ತು ಎಂಟರ್‌ಪ್ರ್ಯೂನರ್‌ಶಿಪ್, 15, ಎರಡನೇ ಮಹಡಿ, ಎಚ್‌ಎಎಸ್ ಆರ್ಕಿಡ್ಸ್ ರಸ್ತೆ, ಜಾಲಹಳ್ಳಿ ಕ್ರಾಸ್, ಬೆಂಗಳೂರು 560057 ಇಲ್ಲಿ ನಡೆಯಲಿದೆ. 10ನೇ ತರಗತಿ ತೇರ್ಗಡೆ ಹೊಂದಿರುವ 16ರಿಂದ 45 ವಯೋಮಿತಿಯ ಅಭ್ಯರ್ಥಿಗಳು ಈ ತರಬೇತಿಗೆ ಅರ್ಹರು.

ತರಬೇತಿ ಮುಗಿದ ಬಳಿಕ ತರಬೇತಿ ಸಂಸ್ಥೆ, ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವಂತ ಬೇಕರಿ ಉದ್ಯಮ ಆರಂಭಿಸಲು, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಪಿಎಂಇಜಿಪಿ ಯೋಜನೆಯಡಿ ಆರ್ಥಿಕ ಸಹಾಯ ಪಡೆಯಲು ಅಗತ್ಯವಾದ ಮಾರ್ಗದರ್ಶನ ನೀಡಲಿದೆ.

ಮಾಹಿತಿಗಾಗಿ ಆಸಕ್ತರು 91485 77075, 080 4168 8560 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:121/241**

# ಕೀ ಉತ್ತರ ಪ್ರಕಟ

**ಬೆಂಗಳೂರು, ಸೆಪ್ಟೆಂಬರ್ 23 ( ಕರ್ನಾಟಕ ವಾರ್ತೆ) :**

ಕರ್ನಾಟಕ ಲೋಕಸೇವಾ ಆಯೋಗ ದಿನಾಂಕ 17–12–2016 ರಲ್ಲಿ ಅಧಿಸೂಚಿಸಿದ ಆಯುಷ್ ಇಲಾಖೆಯ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಆಯುರ್ವೇದ ಪ್ರಾಧ್ಯಾಪಕರು –ಕ್ರಿಯಾ ಶರೀರ, ಶಾಲಾಕ್ಯ ತಂತ್ರ, ರಸಶಾಸ್ತ್ರ ಮತ್ತು ಭೈಷಜ್ಯಕಲ್ಪನಾ, ರೋಗ ನಿಧಾನ, ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ, ಕೌಮಾರಭೃತ್ಯ/ಬಾಲರೋಗ, ಶಲ್ಯತಂತ್ರ ಹಾಗೂ ಆಯುರ್ವೇದ ಸಹ ಪ್ರಾಧ್ಯಾಪಕರು–ಕ್ರಿಯಾ ಶರೀರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ 9–6–2017 ರಂದು ಪ್ರಕಟಿಸಿದ ಕೀ ಉತ್ತರಗಳಿಗೆ ನಿಗದಿತ ಅವಧಿಯೊಳಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ವಿಷಯ ತಜ್ಞರುಗಳಿಂದ ಪರಿಶೀಲಿಸಿ ಪರಿಷ್ಕೃತ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ http:kpsc.kar.nic.in/Key Answers ರಲ್ಲಿ ಪ್ರಕಟಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ:122/242**

# ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 23 ( ಕರ್ನಾಟಕ ವಾರ್ತೆ) :**

ವಸತಿ ಸಚಿವ ಎಂ. ಕೃಷ್ಣಪ್ಪ ಅವರು ಸೆಪ್ಟೆಂಬರ್ 24 ರಂದು ರಾಮನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.